5C.R.P.67

| Form No.4 (Civil) Deposition Sheets (R.P.No.57) |
|---|

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ**
**ಎಸ್.ಸಿ. ನಂ. 172/2022**

ಆರೋಪಿಯನ್ನು ವಿ.ಸಿ. ಮುಖಾಂತರ ಹಾಜರು ಪಡಿಸಲಾಯಿತು.
ದಿನಾಂಕ ಃ 17.10.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 11 ಪಿ. ಡಬ್ಲ್ಯೂ:11

| | |
|---|---|
| ಸಾಕ್ಷಿದಾರರ ಹೆಸರು | ಮನು ಕುಮಾರ್ |
| ತಂದೆಯ ಹೆಸರು | ಮಹದೇವಪ್ಪ |
| ವಯಸ್ಸು | 30 ವರ್ಷ |
| ಉದ್ಯೋಗ | ಚಾಲಕ ವೃತ್ತಿ |
| ವಾಸ | ನೆಟ್ಟಕಲ್ಲು. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಆರೋಪಿ ಸಿದ್ದೇಗೌಡ ಗೊತ್ತು, ಅವರ ಇನ್ನೊಂದು ಹೆಸರು ಜೋಗಪ್ಪ ಆಗಿರುತ್ತದೆ. ನಮ್ಮ ಮನೆಯಿಂದ ಆರೋಪಿ ಸಿದ್ದೇಗೌಡರವರ ಮನೆ, 500 ಮೀಟರ್ ದೂರದಲ್ಲಿ ಇದೆ. ಸದರಿ ಸಿದ್ದೇಗೌಡರವರ ಮನೆ , ಹೊಸ ಮನೆ ಆಗಿರುತ್ತದೆ, ಅವರು ಹಳೆ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿದ್ದರು. ಆರೋಪಿ ಸಿದ್ದೇಗೌಡರವರು ಆಡು ಮೇಯಿಸುವ ಕೆಲಸ ಮಾಡುತ್ತಿದ್ದರು ಹಾಗೂ ಕೂಲಿ ಕೆಲಸ ಮಾಡುತ್ತಿದ್ದರು. ಸಿದ್ದೇಗೌಡರವರ ಮನೆಯಲ್ಲಿ, ಅವರು ಹಾಗೂ ಅವರ ಹೆಂಡತಿ ಮತ್ತು ಮಗ ಇರುತ್ತಿದ್ದರು. 3 ವರುಷಗಳ ಹಿಂದೆ ಸಿದ್ದೇಗೌಡರವರ ಹೆಂಡತಿ ತೀರಿಕೊಂಡಿರುತ್ತಾರೆ.
2. ರಾತ್ರಿ 7.00 ಗಂಟೆ ಸಮಯದಲ್ಲಿ, ಸಿದ್ದೇಗೌಡರವರ ಮನೆಯಿಂದ ಕಿರುಚಾಡುವ ಶಬ್ದ ಕೇಳಿ, ನಾನು ಅಲ್ಲಿಗೆ ಹೋಗಿದ್ದೆನು. ಅಲ್ಲಿ ಹೋದಾಗ, ಸಿದ್ದೇಗೌಡರವರ ಹೆಂಡತಿಗೆ ಬೆಂಕಿ ಹಾಕಿದ್ದರು. ಅವರ ಮಗ ಸಹ ಮನೆಯಲ್ಲಿ ಇದ್ದರು, ಅವರಿಗೂ ಸಹ ಸಣ್ಣ ಪುಟ್ಟ ಸುಟ್ಟ ಗಾಯಗಳಾಗಿತ್ತು. ನಂತರ ಅವರಿಬ್ಬರನ್ನು ಆ್ಯಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಮಳವಳ್ಳಿ ಆಸ್ಪತ್ರೆಯಿಂದ ಮೈಸೂರಿನ ಆಸ್ಪತ್ರೆಗೆ ಸದರಿ ಸಿದ್ದೇಗೌಡರವರ

ಹೆಂಡತಿಯನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದರು, ಅಲ್ಲಿ ಸುಮಾರು 20 ದಿನಗಳ ಕಾಲ ಇದ್ದರು.

3. ಸಿದ್ದೇಗೌಡರವರ ಹೆಂಡತಿಯನ್ನು ಊರಿಗೆ ಕರೆತಂದ ಮೇಲೆ, ಒಂದು ದಿನ ಇದ್ದರು, ನಂತರ ಅವರು ಮೃತರಾಗಿರುತ್ತಾರೆ. ಸದರಿಯವರು ಮೃತರಾದಾಗ ನಾನು ಅವರ ಮನೆಗೆ ಹೋಗಿದ್ದೆನು. ಊರಿನ ಜನ ಸಹ ಬಂದಿದ್ದರು.

4. ನಂತರ ಚಾಸಾ.13 ರವರ ಟಾಟಾ ಏಸ್ ವಾಹನದಲ್ಲಿ ಸಿದ್ದೇಗೌಡರವರ ಹೆಂಡತಿಯ ಶವವನ್ನು ಬೆಳಕವಾಡಿ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ನಂತರ ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ. ಸಾಕ್ಷಿಗೆ ಮಹಜರನ್ನು ತೋರಿಸಲಾಗಿ, ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ನಿಪಿ.25 ಎಂದು, ಸಾಕ್ಷಿಯ ಸಹಿಯನ್ನು ನಿಪಿ.25(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪೊಲೀಸ್ ನೋಟಿಸನ್ನು ತೋರಿಸಲಾಗಿ, ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪೊಲೀಸ್ ನೋಟಿಸನ್ನು ನಿಪಿ.26 ಎಂದು, ಸಾಕ್ಷಿಯ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು.

5. ಸದರಿ ನಿಪಿ.25 ಮತ್ತು 26 ರಲ್ಲಿ ಇರುವ ಸಹಿಗಳನ್ನು ನಾನು ಮಹದೇವಮ್ಮ ಅಂದರೆ ಸಿದ್ದೇಗೌಡರವರ ಹೆಂಡತಿಯ ಮನೆಯಲ್ಲಿ ಮಾಡಿರುತ್ತೇನೆ. ಪೊಲೀಸರು ಸದರಿ ಸಹಿಗಳನ್ನು ಪಡೆದಿದ್ದರು. ಬೇರೆ ಯಾರು ಸದರಿ ದಾಖಲಾತಿಗಳಿಗೆ ಸಹಿ ಮಾಡಿದರು ಎಂದು ನನಗೆ ತಿಳಿದಿಲ್ಲ, ಕಾರಣ ಸ್ಥಳದಲ್ಲಿ ಹಲವಾರು ಜನರು ಇದ್ದರು. ಪೊಲೀಸರು ಸಂಜೆ ಬಂದಿದ್ದು, ರಾತ್ರಿ 9.00 ಗಂಟೆ ತನಕ ಇದ್ದರು.

6. ಸದರಿ ಕಿರುಚಾಟ ಕೇಳಿ ಆರೋಪಿಯ ಮನೆ ಯ ಬಳಿ ಹೋದಾಗ, ಮಹದೇವಮ್ಮ ಹಾಗೂ ಅವರ ಮಗನಿಗೆ ಸುಟ್ಟ ಗಾಯಗಳಾಗಿದ್ದ ಬಗ್ಗೆ ನಾನು ಬೇರೆ ಯಾರನ್ನು ವಿಚಾರಣೆ ಮಾಡಿಲ್ಲ. ಸದರಿ ಸ್ಥಳದಲ್ಲಿ ಮಹದೇವಮ್ಮ ಹಾಗೂ ಅವರ ಮಗನನ್ನು ಸುಡಲು ಉಪಯೋಗಿಸಿದ ವಸ್ತುಗಳನ್ನು ನಾನು ನೋಡಿಲ್ಲ. ಮುದ್ದೇಮಾಲು - 1 ರಿಂದ 7 ವಸ್ತುಗಳನ್ನು ನಾನು ನೋಡಿಲ್ಲ. ಪೊಲೀಸರು ನನ್ನಿಂದ ಮಾಹಿತಿ ಪಡೆದಿಲ್ಲ. ಸದರಿ ಸಿದ್ದೇಗೌಡರವರನ್ನು ನೋಡಿದರೆ ಗುರುತಿಸುತ್ತೇನೆ. ವಿ.ಸಿ. ಮುಖಾಂತರ ಹಾಜರು ಪಡಿಸಿದ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

7. ನಾನು ಸಿದ್ದೇಗೌಡರವರ ಮನೆಯಿಂದ ಕಿರುಚಾಟದ ಶಬ್ದ ಕೇಳಿ ಅಲ್ಲಿಗೆ ಹೋಗಿ ಫ್ರಾಸಾ.1 ಸಿದ್ದರಾಜು ರವರನ್ನು ವಿಚಾರಿಸಿದಾಗ, ತಾನು ಮತ್ತು ತನ್ನ ತಾಯಿ ಸಂಜೆ 7.00 ಗಂಟೆ ಸಮಯದಲ್ಲಿ ಮನೆಯಲ್ಲಿ ಇದ್ದಾಗ ಆರೋಪಿಯು ಏಕಾಏಕಿ ಮನೆಯ ಒಳಗೆ ಬಂದು, ತಮಗೆ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ, ಅವ್ವ ಮಗನಿಗೆ ಈ ಮನೆ ಕಟ್ಟಿಸಿ ಸಾಕಾಗಿತ್ತಾ, ಈ ಈ ಮನೆ ನನ್ನದು, ಆಡುಗಳು ನನ್ನವು, ನೀವಿಬ್ಬರೂ ಮನೆಯಿಂದ ಹೊರಗೆ ಹೋಗಿ ಎಂದು ಬೈದರು ಹಾಗೂ ಕೊಲೆ ಮಾಡುವ ಉದ್ದೇಶದಿಂದ ತಮಗೆ ಬೆಂಕಿ ಹಾಕಿದ್ದರೆಂದ ಹೇಳಿದ್ದರು ಎಂದರೆ ಸರಿಯಲ್ಲ.

8. ಮುಮಾ.1 ರಿಂದ 7 ವಸ್ತುಗಳನ್ನು ನಾನು ಸಿದ್ದೇಗೌಡರವರ ಮನೆಯಲ್ಲಿ ನೋಡಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ ‘‘ ತಮಗೆ .....................................................ಕೊಲೆ ಮಾಡುವ ಉದ್ದೇಶದಿಂದ ’’ ಮತ್ತು ‘‘ ಸ್ಥಳದಲ್ಲಿ ..................................................... ನೋಡಿರುತ್ತೇನೆ ’’ ಮತ್ತು ‘‘ ದಿಃ 03.08.2022 ರಂದು ..................................................... ಗುರುತಿಸುತ್ತೇನೆ ’’ ಎಂಬ ಭಾಗಗಳನ್ನು ಅಭಿಯೋಜಕರು ಓದಿಹೇಳಿದ್ದು, ಸದರಿ ಹೇಳಿಕೆಯ ಭಾಗಗಳನ್ನು ಸಾಕ್ಷಿಯು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗಗಳನ್ನು ನಿಪಿ.27, 27(ಎ) ಮತ್ತು 27(ಬಿ) ಎಂದು ಗುರುತಿಸಲಾಯಿತು. ಮುಮಾ.1 ರಿಂದ 7 ವಸ್ತುಗಳನ್ನು ನಾನು ಸ್ಥಳದಲ್ಲಿ ನೋಡಿದ್ದರು ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೊಸ ಮನೆ ಕಟ್ಟಿದ ವಿಚಾರದಲ್ಲಿ ಸಿದ್ದೇಗೌಡರವರು ಅವರ ಹೆಂಡತಿ ಮತ್ತು ಮಗನೊಂದಿಗೆ ಗಲಾಟೆ ಮಾಡುತ್ತಿದ್ದ ವಿಚಾರ ಗೊತ್ತು ಎಂದರೆ ಸರಿ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ ಮುಖ್ಯ defence counsel ರವರಿಂದ ಃ**

9. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಮಹದೇವಮ್ಮ ರವರಿಗೆ ಬೆಂಕಿ ಹತ್ತಿಕೊಂಡು ಉರಿಯುತ್ತಿತ್ತು ಎಂದರೆ ಸರಿ. ಅವರಿಗೆ ಯಾವ ರೀತಿ ಬೆಂಕಿ ಹತ್ತಿಕೊಂಡಿತ್ತು ಎಂದುನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಆರೋಪಿಯ ಮನೆಯನ್ನು 3 ವರುಷಗಳ ಹಿಂದೆ ಕಟ್ಟಲಾಗಿದೆ. ಸದರಿ ಸಿದ್ದೇಗೌಡ, ಅವರ ಹೆಂಡತಿ ಮತ್ತು ಮಗ ಒಟ್ಟಾಗಿ ಚೆನ್ನಾಗಿ ಇದ್ದರು ಎಂದರೆ ಸಾಕ್ಷಿಯು, ಅವರು ಒಟ್ಟಿಗೆ ಇದ್ದರು ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.